ದಿನಾಂಕಃ **03-01-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಸಾಕ್ಷಿಯನ್ನು ವಾಟ್ಸ್ ಆ್ಯಪ್ ವೀಡಿಯೋ ಕಾಲ್ ಮುಖಾಂತರ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.
ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಹೆಚ್ ಎಸ್ ಕೆ ವಕೀಲರಿಂದಃ

ನಾನು ಎಂ.ಎಸ್ಸಿ Bio-chemistry ವ್ಯಾಸಂಗ ಮಾಡಿರುತ್ತೇನೆ. ನಾನು ಒಂದರಿಂದ ಏಳನೇತರಗತಿ ವರೆಗೆ ಭಾರತೀಯ ಕಾಫಿ ವಿದ್ಯಾಯಲಯ ಸೀಗೋಡು ಇಲ್ಲಿ ವ್ಯಾಸಂಗ ಮಾಡಿರುತ್ತೇನೆ, ಎಂಟನೇ ತರಗತಿಯಿಂದ ಡಿಗ್ರಿಯವರೆಗೆ ಉಜಿರೆಯ ಎಸ್.ಡಿ.ಎಂ.ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರತ್ತೇನೆ. ನಾನು ಎಂ ಎಸ್ಸಿ ಸ್ನಾತಕೋತ್ತರ ಪದವಿಯನ್ನು ಮೈಸೂರಿನ ಜೆ.ಎಸ್.ಎಸ್ ಕಾಲೇಜಿನಲ್ಲಿ ಮುಗಿಸಿರುತ್ತೇನೆ. ನಂತರ ನಾನು ಮದುವೆಯ ಪೂರ್ವದಲ್ಲಿ ಉನ್ನತ ವ್ಯಾಸಂಗಕ್ಕೆ ಸೇರಿರುವುದಿಲ್ಲ. ನನ್ನ ಒಂದನೇ ತರಗತಿಯಿಂದ ಎಂ ಎಸ್ಸಿ ಸ್ನಾತಕೋತ್ತರ ಪದವಿಯವರೆಗೆ ನನ್ನ ತಂದೆ ತಾಯಿ ಪ್ರೀತಿಯಿಂದ ನೋಡಿಕೊಂಡು ಶೈಕ್ಷಣಿಕ ಖರ್ಚು ವೆಚ್ಚಗಳನ್ನು ಭರಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನನ್ನ ಶೈಕ್ಷಣಿಕ ಖರ್ಚು ವೆಚ್ಚಗಳನ್ನು ನನ್ನ ದೊಡ್ಡಪ್ಪನಾದ ಕಲ್ಕುಳಿ ಮರಿಯಪ್ಪ ಹೆಗ್ಗಡೆಯವರ ಮಗ ಮಲ್ಲಪ್ಪ ಹೆಗ್ಗಡೆ ಕಲ್ಲುಳಿ ಇವರು ವಹಿಸಿರುತ್ತಾರೆ.

2. ಮಲ್ಲಪ್ಪ ಹೆಗ್ಗಡೆ ನಿಮ್ಮ ಪರ ಸಾಕ್ಷಿ ಹೇಳುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಅವರನ್ನು ಕೇಳಬೇಕು ಎಂದು ಉತ್ತರಿಸುತ್ತಾರೆ. ನಾನು ಓದಿದ ಎಲ್ಲಾ ಶಾಲೆಗಳು ಖಾಸಗಿ ಶಿಕ್ಷಣ ಸಂಸ್ಥೆಗಳು ಎಂದರೆ ಸರಿ. ನನಗೆ ಒಂದನೇ ತರಗತಿಯಿಂದಲೇ ನಮ್ಮ ತಾಯಿಯ ನಡುವೆ ನನಗೆ ವೈಶಮ್ಯ ಇರುತ್ತದೆ. ಈಗ್ಗೆ 10 ವರ್ಷಗಳಿಂದ ನನ್ನ ಸಹೋದರನ ನಡುವೆ ನನಗೆ ವೈಶಮ್ಯ ಇರುತ್ತದೆ. ನಾನು ಚಿಕ್ಕವಳಿದ್ದಾಗ ನನ್ನನ್ನು ಬೋರ್ಡಿಂಗ್ ಶಾಲೆಗೆ ಸೇರಿಸಿದ್ದು ಹಾಗೂ ಮನೆಯಿಂದ ಹೊರಗೆ ಹಾಕಿದ ಕಾರಣ ನಮ್ಮ ತಂದೆ ತಾಯಿಯ ಮೇಲೆ ನನಗೆ ವೈಶಮ್ಯ ಇರುತ್ತದೆ.

3. ನನ್ನ ಮದುವೆಯ ನಿಶ್ಚಿತಾರ್ಥ ಕಾರ್ಯ ದಾವಾ ಸ್ವತ್ತು 7 ರಲ್ಲಿ ನಡೆದಿರುತ್ತದೆ. ನನ್ನ ಮದುವೆಯ ನಿಶ್ಚಿತಾರ್ಥ ಕಾರ್ಯಕ್ಕೆ ಹುಡುಗನ ಮನೆಯವರು ತುಮಕೂರಿನಿಂದ ಬಂದಿದ್ದರು. ಸದರಿ ನಿಶ್ಚಿತಾರ್ಥ ಕಾರ್ಯಕ್ಕೆ ಸುಮಾರು 15 ಜನ ಸೇರಿದ್ದರು. ಸದರಿ ನಿಶ್ಚಿತಾರ್ಥ ಕಾರ್ಯಕ್ರಮದ ವೀಡಿಯೋ ಮತ್ತು ಫೋಟೋಗ್ರಾಫ್ ಮಾಡಿರುತ್ತಾರೆ. ಸದರಿ

3/1/26

ನಿಶ್ಚಿತಾರ್ಥ ಕಾರ್ಯ ಹುಡುಗನಿಗೆ ಹಾಗೂ ನನಗೆ ಇಷ್ಟ ಇಲ್ಲದ ಕಾರಣ ನಿಂತು ಹೋಗಿರುತ್ತದೆ ಸಾಕ್ಷಿ ಮುಂದುವರೆದು ನಮ್ಮ ತಂದೆ ಬಲವಂತದಿಂದ ನಿಶ್ಚಿತಾರ್ಥ ಕಾರ್ಯ ಮಾಡಲು ಹೇಳಿದ್ದರು ಎಂದು ಉತ್ತರಿಸುತ್ತಾರೆ. ನನ್ನ ಮತ್ತು ನಮ್ಮ ತಂದೆಯ ವಿರುದ್ಧ ತುಮಕೂರು ಪೊಲೀಸ್ ಠಾಣೆಯಲ್ಲಿ ನಿಶ್ಚಿತಾರ್ಥ ಕಾರ್ಯದ ಸಂಬಂಧ ದೂರು ದಾಖಲಾಗಿರುತ್ತದೆ. ಆಗ ಪೊಲೀಸ್ ಠಾಣೆಗೆ ನಾನು ಮತ್ತು ನನ್ನ ತಂದೆ ಹೋಗಿರುತ್ತೇವೆ. ನಾವು ಪೊಲೀಸ್ ಠಾಣೆಗೆ ಹೋದಾಗ ಹುಡುಗನ ಕಡೆಯವರು ಕೊಟ್ಟ ಬಂಗಾರದ ಒಡವೆಗಳನ್ನು ಕೊಟ್ಟಿರುತ್ತೇವೆ.

4. ತುಮಕೂರು ಪೊಲೀಸ್ ಠಾಣೆಯಲ್ಲಿ ನೀಡಿದ ಹೇಳಿಕೆ ಮತ್ತು ಅದಕ್ಕೆ ಸಂಬಂಧ ದಾಖಲೆಗಳನ್ನು ತರಿಸಲು ನನ್ನದು ತಕರಾರು ಇರುವುದಿಲ್ಲ. ಕಲ್ಕಟ್ಟೆ ಕುಟುಬಂದ ಸಂಬಂಧವನ್ನು ಯಾವ ಕಾರಣಕ್ಕಾಗಿ ಬಿಟ್ಟಿರುತ್ತೇನೆ ಎಂದರೆ ಸಾಕ್ಷಿ ಜಾತಕ ಸರಿ ಹೊಂದದ ಕಾರಣ ಬಿಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ನನ್ನ ಎಂ ಎಸ್ಸಿ ಪದವಿ ಮುಗಿದ ನಂತರ ಮೇಲೆ ಹೇಳಿದ ಎರಡು ಘಟನೆ ನಡೆದಿರುತ್ತದೆ ಎಂದರೆ ಸರಿ. ನಾನು ಎಂ ಎಸ್ಸಿ ಪದವಿ ಮುಗಿದ ನಂತರ ಸಿದ್ದಿವಿನಾಯಕ ಸ್ವೈಕೂಮ್ ಪ್ರೈವೆಟ್ ಲಿ., ನಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ನಾನು ಎಂ ಎಸ್ಸಿ ಪದವಿಯನ್ನು 2016 ರಲ್ಲಿ ಮುಗಿಸಿರುತ್ತೇನೆ. ನಾನು ಎಂ ಎಸ್ಸಿ ಪದವಿ ಮುಗಿದ ನಂತರ ಮೂರು ಸೈಡ್ ಕೋರ್ಸ್ ಗಳನ್ನು ಮುಗಿಸಿರುತ್ತೇನೆ. ಸದರಿ ಮೂರು ಸೈಡ್ ಕೋರ್ಸ್ ಗಳಿಗೆ ಮಲ್ಲಪ್ಪ ಹೆಗ್ಗಡೆ ಹಣ ಪಾವತಿ ಮಾಡಿರುತ್ತಾರೆ. ನನ್ನ ಯೋಗ ಕ್ಷೇಮ, ಶೈಕ್ಷಣಿಕ ಖರ್ಚು ವೆಚ್ಚಗಳನ್ನು ಹಾಗೂ ನನ್ನ ಬೇಕು ಬೇಡಗಳನ್ನು ನಿಮ್ಮ ತಂದೆ ತಾಯಿ ನೆರವೇರಿಸಿರುತ್ತಾರೆ ಸರಿಯಲ್ಲ. ನನ್ನ ಮೊದಲನೆ ನಿಶ್ಚಿತಾರ್ಥಕೆ ಸುಮಾರು ಒಂದು ಸಾವಿರದಷ್ಟು ಜನ ಸೇರಿರುತ್ತಾರೆ ಎಂದರೆ ಸರಿಯಲ್ಲ.

5. ವಗಳೆ ಕುಟುಂಬ ಅಪರಾ ಬಂಧು ಬಳಗಳನ್ನು ಹೊಂದಿದ ಕುಟುಂಬ ಎಂದರೆ ಸರಿ. ಆ ದಿನ ಯಾರು ಯಾರು ನಿಶ್ಚಿತಾರ್ಥ ಕಾರ್ಯಕ್ಕೆ ಬಂದಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಪಾಲು ಪತ್ರ ನೋಂದಣಿ ಮಾಡುವ ಕಾಲಕ್ಕೆ ನಾನು, ನನ್ನ ತಂದೆ ಹಾಗೂ ನನ್ನ ಅಣ್ಣ ಕೊಪ್ಪ ನೋಂದಣಿ ಅಧಿಕಾರಿಯವರ ಕಛೇರಿಗೆ ಹೋಗಿರುತ್ತೇವೆ. ಹರಿಹರಪುರ ಮತ್ತು ಮೇಲ್ಪಿರ್ಲೆ ಇದು ವಗಳೆಯ ಆಸುಪಾಸಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ದಿನಾಂಕ 03.04.2017 ವಿಭಾಗ ಪತ್ರ ಆಗುವ

3/1/26

ಕಾಲಕ್ಕೆ ನಾನು ನನ್ನ ಸ್ನಾತಕೋತ್ತರ ಪದವಿಯನ್ನು ಮುಗಿಸಿದ್ದೆ ಎಂದರೆ ಸರಿ ಹಾಗೂ ನಾನು ವಯಸ್ಕಳು ಇದ್ದೆ ಎಂದರೆ ಸರಿ. ಪಾಲು ಪತ್ರ ನೋಂದಣಿ ಆಗುವ ಕಾಲಕ್ಕೆ ನಾನು ಉಪ ನೋಂದಣಾಧಿಕಾ ರಿ ಕಛೇರಿಯಲ್ಲಿ ಎಷ್ಟು ಹೊತ್ತು ಇದ್ದೆ ಎಂದು ನೆನಪಿರುವುದಿಲ್ಲ ಸಾಕ್ಷಿ ಮುಂದುವರೆದು ಸುಮಾರು 10 ವರ್ಷಗಳು ಆಗಿರುತ್ತದೆ ಎ

6. ನನ್ನ ವಿವಾಹ ಪೂರ್ವದಲ್ಲಿ ಮಾತು ಕತೆ ಆಗಿರುತ್ತದೆ ಆದರೆ ನಿಶ್ಚಿತಾರ್ಥ ಕಾರ್ಯ ಆಗಿರುವುದಿಲ್ಲ. ಈಗ ನಾನು ಮದುವೆಯಾಗಿರುವ ಹುಡುಗನನ್ನು ಅಪ್ಪ ಅಮ್ಮ ಮತ್ತು ಅಣ್ಣ ತೋರಿಸಿರುತ್ತಾರೆ. ಸದರಿ ಈ ವಿವಾಹಕ್ಕೆ ಯಾರು ಮಧ್ಯಸ್ಥರು ಇರಲಿಲ್ಲ ಸಾಕ್ಷಿ ಮುಂದುವರೆದು ನಮ್ಮ ತಂದೆಯೇ ನೋಡಿದ್ದರು ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಗಂಡ ಈಗ ಅಮೇರಿಕಾದ ಮ್ಯಾಚೆಸ್ಟರ್ ನಲ್ಲಿ ವಾಸ ಇರುತ್ತೇನೆ. ನಾನು ಮತ್ತು ನನ್ನ ಗಂಡ ಅಲ್ಲಿ ಒಟ್ಟಾಗಿ ವಾಸ ಇರುತ್ತೇವೆ ಎಂದರೆ ಸರಿ. 2017 ರಿಂದ ಇಲ್ಲಿಯವರೆಗೆ ನಾನು ಒಟ್ಟು ಕುಟುಂಬದ ವ್ಯಾಖ್ಯಾನದಲ್ಲಿ ಇರುವುದಿಲ್ಲ ಎಂದರೆ ಸರಿ.

7. 2017 ರಿಂದ ಇಲ್ಲಿಯವರೆಗೆ ನಮ್ಮ ತಂದೆ ನನ್ನ ಒಳಿತಿಗಾಗಿ ಯಾವುದೇ ಕೆಲಸಗಳನ್ನು ಮಾಡಿರುವುದಿಲ್ಲ. ಮದುವೆಯ ಕಾಲಕ್ಕೆ ಖರ್ಚು ವೆಚ್ಚಗಳನ್ನು ನಿಮ್ಮ ತಂದೆ ತಾಯಿ ಭರಿಸಿರುತ್ತಾರೆ ಎಂದರೆ ಸಾಕ್ಷಿ ಅವರು ಯಾವುದೇ ಖರ್ಚು ವೆಚ್ಚ ಮಾಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಮದುವೆಗೆ ಮಲ್ಲಪ್ಪ ಹೆಗ್ಗಡೆ ಅವರ ಅಣ್ಣ ತಮ್ಮಂದಿರು ಹಾಗೂ ಸುಮಾರು 20 ಜನರು ಬಿಟ್ಟು ಬೇರೆ ಯಾರು ಬಂದಿರಲಿಲ್ಲ. ಮದುವೆಯ ಕಾಲಕ್ಕೆ ನನ್ನ ಸಂಬಂಧ ನನ್ನ ತಂದೆ ತಾಯಿಯ ಜೊತೆ ಚೆನ್ನಾಗಿ ಇತ್ತು ಎಂದರೆ ಸಾಕ್ಷಿ ನನ್ನ ಇಚ್ಛೆಗೆ ವಿರುದ್ಧವಾಗಿ ಮದುವೆ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಗಂಡ ಈಗ ಅನ್ಯೋನ್ಯವಾಗಿ ಇದ್ದೇವೆ ಎಂದರೆ ಸರಿ. ನಾನು ಮೊದಲಿನ ಎರಡು ಸಂಬಂಧಗಳನ್ನು ವಿದೇಶದ ಹುಡುಗ ಬೇಕು ಎಂದು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ.

8. ನೀವು ಯಾರ ಪ್ರಚೋದನೆ ಮೇರೆಗೆ ಶೃಂಗೇರಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನನ್ನ ತಂದೆ ನನ್ನ ಮೇಲೆ ಹಲ್ಲೆ ಮಾಡಲು ಬಂದ ಸಂಬಂಧ ನಾನೆ ದೂರು ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ನೀಡಿದ ದೂರಿಗೆ ಶೃಂಗೇರಿ ಪೊಲೀಸ್ ರವರು ಬಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೊಲೀಸರು ಕರೆದಾಗ ನಾನು ಹೋಗದ ಕಾರಣ ಅವರು ಬಿ

31/1/26

ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಪೊಲೀಸರು ಸಲ್ಲಿಸಿದ ಬಿ ವರದಿಯನ್ನು ನಾನು ಪ್ರತಿರೋಧಿರುವುದಿಲ್ಲ ಎಂದರೆ ಸರಿ.

9. ನನ್ನ ಮದುವೆ ಆಗಿ 2-3 ತಿಂಗಳೊಳಗಾಗಿ ನಾನು ವಿದೇಶಕ್ಕೆ ಹೋಗಿರುತ್ತೇನೆ. ನಾನು ಮೇ 2024 ರಲ್ಲಿ ವಿದೇಶದಿಂದ ಭಾರತಕ್ಕೆ ವಾಪಸ್ಸು ಬಂದಿರುತ್ತೇನೆ. ದಿನಾಂಕ 03.03.2023 ರಂದು ನನ್ನ ಮದುವೆ ರಜಿತ್ ಎಂಬುವರ ಜೊತೆ ಆಗಿರುತ್ತದೆ. ದಿನಾಂಕ 07.06.2023 ರಂದು ನಾನು ವಿದೇಶಕ್ಕೆ ಹೋಗಿರುತ್ತೇನೆ. ಮೇ 2023 ರ ಕೊನೆ ವಾರದಲ್ಲಿ ನಾನು ಎನ್ ಆರ್ ಪುರ ನ್ಯಾಯಲಯಕ್ಕೆ ಬಂದಿರುತ್ತೇನೆ. ನಾನು ದಾವೆ ಸಲ್ಲಿಸುವ ಸಂಬಂಧ ಎನ್ ಆರ್ ಪುರ ನ್ಯಾಯಾಲಯಕ್ಕೆ ಬಂದಿರುತ್ತೇನೆ. ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ನನ್ನ ತಂದೆ ತಾಯಿ ಮತ್ತು ನನ್ನ ಸಹೋದರನಿಗೆ ವಕೀಲರ ಮುಖಾಂತರ ನೋಟೀಸು ಕೊಟ್ಟಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆ ನಮ್ಮ ಊರಿನ ವೆಂಕಟರಮಣ ದೇವಸ್ಥಾನದ ಸಮೀಪ ತುಂಗಾ ನದಿಯ ಹತ್ತಿರ ಮರಳು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ಮರಳು ವ್ಯಾಪಾರವನ್ನು ಎಷ್ಟು ವರ್ಷಗಳ ಕಾಲ ಮಾಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ನಮ್ಮ ತಂದೆ ಖೇಣಿ ವ್ಯವಹಾರವನ್ನು ಎಷ್ಟು ವರ್ಷಗಳ ಕಾಲ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಹೊರಗೆ ವಿದ್ಯಾಭ್ಯಾಸ ಮಾಡುತ್ತಿದ್ದ ಕಾರಣ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತಾಯಿ ಶ್ರಮ ಜೀವಿಗಳು ಎಂದರೆ ಸಾಕ್ಷಿ ನಮ್ಮ ತಾಯಿ ಶ್ರಮ ಜೀವಿ ಇರುತ್ತಾರೆ ಆದರೆ ನಮ್ಮ ತಂದೆಯ ಬಗ್ಗೆ ಒಪ್ಪವುದಿಲ್ಲ ಎಂದು ಉತ್ತರಿಸುತ್ತಾರೆ.

10.ನಮ್ಮ ತಂದೆ ಮಾಡುತ್ತಿದ್ದ ಅಡಿಕೆ ಚೇಣಿ ವ್ಯವಹಾರವನ್ನುನಮ್ಮ ತಾಯಿ ನೋಡಿಕೊಳ್ಳುತಿದ್ದರು ಎಂದರೆ ಸರಿ ಸಾಕ್ಷಿ ಮುಂದುವರೆದು ನಾನು ಹೊರಗೆ ಇದ್ದ ಕಾರಣ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ತುಮಕೂರಿನ ನಿಶ್ಚಿತಾರ್ಥಕಾರ್ಯವನ್ನು ನನ್ನ ಸ್ವಾ-ಇಚ್ಚೆಯಿಂದ ಮುರಿದಿರುತ್ತೇನೆ ಎಂದರೆ ಸರಿ. ನಾನು ಬಂಗಾರವನ್ನು ವಾಪಸ್ಸು ಕೊಡಲು ಆಟ ಆಡಿಸಿರುತ್ತೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಮ್ಮ ತಂದೆ ಆಟ ಆಡಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಕಲ್ಕಟ್ಟೆ ಸಂಬಂಧವನ್ನು ನಾನು ಸ್ವಾ ಇಚ್ಚೆಯಿಂದ ಮುರಿದಿರುತ್ತೇನೆ ಎಂದರೆ ಸರಿಯಲ್ಲ. ಪಾಲುಪತ್ರ ನೊಂದಣಿ ಆದ ನಂತರ ನನ್ನ ಮತ್ತು ನನ್ನ ತಂದೆ ತಾಯಿಯ ಸಂಬಂಧ ಮುರಿದು ಹೋಗಿರುತ್ತದೆ. ಸಾಕ್ಷಿಗೆ ದಿನಾಂಕ 03.04.2017 ರ

3/1/26

ನೋಂದಣಿ ವಿಭಾಗ ಪತ್ರವನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ವಿಭಾಗ ಪತ್ರದಲ್ಲಿ ನಮ್ಮ ಕುಟುಂಬದ ಆಸ್ತಿಗಳ ಬಗ್ಗೆ ಉಲ್ಲೇಖ ಮಾಡಲಾಗಿರುತ್ತದೆ ಎಂದರೆ ಸರಿ.

11. ದಾವಾ ಸ್ವತ್ತು 6 ನಮ್ಮ ತಂದೆ ಸರ್ಕಾರದಿಂದ ಮಂಜೂರು ಆಗಿರುತ್ತದೆ ಎಂದರೆ ಸರಿ. ಸದರಿ ಮಂಜೂರಾತಿ ಪಾಲು ಪತ್ರ ಆದ ನಂತರ ಆಗಿರುತ್ತದೆ. ದಾವಾ ಸ್ವತ್ತು 7 ನಮ್ಮ ತಂದೆಗೆ ಮಂಜೂರಾತಿ ಆಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ಸದರಿ ಮನೆ ಮಂಜೂರಾದ ನಂತರ ನಿಮ್ಮ ತಂದೆ ಹರಿಹರಪುರ ಕೆನರಾ ಬ್ಯಾಂಕ್ ಮತ್ತು ಸಿಡಿಸಿಸಿ ಬ್ಯಾಂಕ್ ನಲ್ಲಿ ಸಾಲ ಮಾಡಿ ಮನೆ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿ ಸಾಲ ಮಾಡಿದ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು 7 ರಲ್ಲಿ ನಮ್ಮ ತಂದೆ ಹೊಸ ಮನೆ ಕಟ್ಟಿಸಿರುತ್ತಾರೆ ಎಂದರೆ ಸರಿ. ನಾನು ಅಮೇರಿಕಾಕ್ಕೆ ಹೋಗುವ ಪೂರ್ವದಲ್ಲಿ ಮಲ್ಲಪ್ಪ ಹೆಗ್ಗಡೆ ಇವರ ಮನೆಯಲ್ಲಿ ಮಾತು ಕತೆಗೆ ನಾನು, ನನ್ನ ತಂದೆ ತಾಯಿ, ನನ್ನ ಭಾವ ತ್ರಿಮೂರ್ತಿ ಸಸಿತೋಟ ಮೆಣಸೆ, ಮಲ್ಲಪ್ಪ ಹೆಗ್ಗಡೆ ಮತ್ತು ಅವರ ಹೆಂಡತಿ ಹಾಗೂ ನಮ್ಮ ತಂದೆಯ ಅಕ್ಕ ಹಾಜರಿದ್ದರು. ಸದರಿ ಮಾತುಕತೆಯಲ್ಲಿ ಮದುವೆಯ ಕಾಲಕ್ಕೆ ಕೊಡಬೇಕಾದ ಚಿನ್ನಾ ಬೆಳ್ಳಿ ಕೊಟ್ಟಿರುವುದಿಲ್ಲ ಹಾಗೂ ನನ್ನ ಗಂಡನನ್ನು ಸರಿಯಾಗಿ ನಡೆಸಿಕೊಂಡಿರುವುದಿಲ್ಲ ಎಂದು ಮಾತುಕತೆಗೆ ಸೇರಿದ್ದೆವು. ಈ ಮೇಲೆ ಹೇಳಿದ ವಿಚಾರಗಳನ್ನು ಬಿಟ್ಟು ಬೇರೆ ಯಾವುದೇ ಮಾತುಕತೆ ಇರಲಿಲ್ಲ ಎಂದರೆ ಸರಿ.

12. ನಾನು, ನನ್ನ ಗಂಡ ಹಾಗೂ ನನ್ನ ಅತ್ತೆ ಸಂಚು ರೂಪಿಸಿ ತಗಾದೆ ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಕಾಲಮಿತಿ ಒಳಗೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ವಾ ಉದ್ಯೋಗದಿಂದ ಮಾಸಿಕ ರೂ.10 ಸಾವಿರ ನಂತರ ಮತ್ತೊಂದ ಕಂಪನಿಯಲ್ಲಿ ರೂ.20 ಸಾವಿರ ತೆಗೆದುಕೊಳ್ಳುತ್ತಿದ್ದೆನು. ನಾನು ಉದ್ಯೋಗ ಮಾಡುವ ಕಾಲಕ್ಕೆ ಬೆಂಗಳೂರಿನಲ್ಲಿ ವಾಸ ಇದ್ದೆ ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ಇದ್ದಾಗ ಪಿ.ಜಿಯಲ್ಲಿ ವಾಸ ಇದ್ದೆನು. ನಾನು ಪಾಲು ಪತ್ರವನ್ನು ನನ್ನ ಸಂಪೂರ್ಣ ಜ್ಞಾನದಿಂದ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪತ್ರ ಆಗುವ ಕಾಲಕ್ಕೆ ಹಣ ಮತ್ತು ಆಸ್ತಿ ಕೊಡುತ್ತೀನಿ ಎಂದು ಹೇಳಿದ್ದರು ಆದರೆ ಇದುವರೆಗೂ ಕೊಟ್ಟಿರುವುದಿಲ್ಲ

3/1/26

ಎಂದು ಉತ್ತರಿಸುತ್ತಾರೆ. ನಾನು ಸುಳ್ಳು ನ್ಯಾಯಾಲಯಕ್ಕೆ ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಇಚ್ಛೆಗೆ ಅನುಗುಣವಾಗಿ ನನ್ನ ತಂದೆ ತಾಯಿ ಮದುವೆ ಕಾರ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವೆ ಸಲ್ಲಿಸಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ